ಮುಖಾಮುಖಿಯಾಗಬೇಕು. ಕವಿಗೆ ತನ್ನದೇ ದಾರಿ ಇರಬೇಕು. ಇನ್ನೊಬ್ಬರ ದಾರಿಯಲ್ಲಿ ಎಷ್ಟು ದಿನ ನಡೆಯುವುದು. ಹಾಗೇನೆ ಕವಿಯ ಕಾವ್ಯಕ್ಕೆ ಮುಖವಾಡ ಇರಬಾರದು. ಇಂತಹ ಸಂದರ್ಭದಲ್ಲಿ ಗುಡಿಸಲಿನ ಬಗ್ಗೆ, ಬರೀ ನೋವಿನ ಬಗ್ಗೆ, ಕೊಳಕಿನ ಬಗ್ಗೆ ಬರೆಯುವುದು ಅದೆಂಥ ಸಾಹಿತ್ಯ ಎಂಬ ಕುಹಕದ ಮಾತು ಕೇಳಿದ್ದೇನೆ. ಕಾವ್ಯವೆಂದರೆ ಹೊಸ ಮನುಷ್ಯನ ಹುಡುಕಾಟ. ಕಾವ್ಯವೆಂದರೆ ಮನುಷ್ಯತ್ವ. ಆ ದಿಕ್ಕಿನಲ್ಲಿ ಸಾಗಿ ಸುಖಿಪಟ್ಟಿದ್ದೇನೆ. 'ನಾ ಪಟ್ಟ ಪಾಡು ಅದು ನನ್ನ ಹಾಡು' ಎಂದು ನಾನಂತೂ ಸಂಭ್ರಮಿಸಿದ್ದೇನೆ. ವಿಜೃಂಭಿಸಿಲ್ಲ. ನನ್ನ ದೃಷ್ಟಿಯಲ್ಲಿ ಸಂಭ್ರಮ ಬೇರೆ, ವಿಜೃಂಭಣೆ ಬೇರೆ. ಸಂಭ್ರಮ ಎಲ್ಲರೊಳಗೊಂದಾಗಿ ಸುಖಿಸುವುದು. ವಿಜೃಂಭಣೆ ಒಬ್ಬನ ಸುತ್ತ ಎಲ್ಲರೂ ಕುಣಿಯುವುದು, ಗಿರಕಿ ಹೊಡೆಯುವುದು. ನಾನು ಕವಿತೆ ಬರೆಯುವುದನ್ನು ಗಮನಿಸಿದ ನನ್ನ ಅಕ್ಕನ ಗಂಡ, 'ನೀ ಏನ ಕವಿತೆ ಬರೀತೆಲೇ ನನ್ನತು...' ಎಂದಿದ್ದ. ಆಗ ನಾನು ಬಹಳ ಅತ್ತಿದ್ದೆ. ಆದರೆ ಅವನ ಶವ ಸಂಸ್ಕಾರ ನನ್ನ ಕವಿತೆಯ ದುಡ್ಡಿನಿಂದಲೇ ಮಾಡಿದೆ. ಆಗ ಆತ ಇರಲಿಲ್ಲ. ಮಂಜಾದ ಕಣ್ಣಿನಲ್ಲಿ, ಇಳಿ ವಯಸ್ಸಿನ ನನ್ನ ತಂದೆ ನನ್ನ ಕವಿತೆಗಳನ್ನು ತನ್ನ ಕಿರುಗಣ್ಣಿನಲ್ಲಿ ಓದಿದ್ದು ಕಂಡು ಸಂತಸಗೊಂಡಿದ್ದೆ.

◆ **ಜಾಜಿಮಲ್ಲಿಗೆ, ಜಾಲಿಮರ ಇವೆರಡೂ ನಿಮಗೆ ಇಷ್ಟವಾದ ರೂಪಕಗಳು. ಇವೆರಡರಲ್ಲಿ ನೀವು ನಿಲ್ಲುವುದು ಯಾವುದರ ಕಡೆ? ಬದುಕಿಗೆ ಇವೆರಡೂ ಮುಖ್ಯ ಅಲ್ಲವೇ?**

ನನ್ನ 'ಜಾಜಿಮಲ್ಲಿಗೆ' ಕವಿತೆಯಲ್ಲಿ ಇದಕ್ಕೆ ಉತ್ತರವಿದೆ. ಪರಿಮಳ ಸೂಸುವುದು ಮಲ್ಲಿಗೆಯ ಗುಣ. ನಾಡಿನ ಮಲ್ಲಿಗೆಗೆ ಸಾಕಿ ಸಲಹುವವರ ಅಗತ್ಯವಿದೆ. ಆದರೆ ಕಾಡು ಹೂವಾದ ಜಾಜಿಮಲ್ಲಿಗೆಗೆ ಯಾರ ರಕ್ಷಣೆ ಪೋಷಣೆ ಇಲ್ಲದಿದ್ದರೂ ಅದು ತನ್ನ ಅಂತಃಶಕ್ತಿಯಿಂದ ಅರಳಿ ಪರಿಮಳ ಸೂಸುವ ಸಾಮರ್ಥ್ಯ ಹೊಂದಿದೆ. ತನ್ನದೇ ಆದ ಚೆಲುವು, ಪರಿಮಳ ಅದಕ್ಕಿದೆ. ಇನ್ನು, ಜಾಲಿಮರಕ್ಕೆ ಯಾರ ಹಂಗೂ ಇಲ್ಲ. ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ. ಮುಟ್ಟಿದರೆ, ತುಳಿದರಷ್ಟೇ ಅದರ ಶಕ್ತಿ ಗೊತ್ತಾಗುವುದು. ಜಾಲಿಮರದ ಜೊತೆ ಜೊತೆ ಬೆಳೆದಿದ್ದೇನೆ; ಅದರ ನೆರಳಿನಲ್ಲಿ ಓದಿದ್ದೇನೆ. ರೈತನ ಆಪ್ತ ಸಖನಂತಿರುವ, ಬಡವರ ಬಂಧುವಾದ ಜಾಲಿ, ಜಾಜಿಮಲ್ಲಿಗೆ ಎರಡೂ ನನಗಿಷ್ಟ. ಎರಡೂ ನನ್ನ ಬದುಕಿನ ನೆಚ್ಚಿನ ಸಂಗಾತಿಗಳು. ಮಳೆ, ಹಳ್ಳ ಸೊರಗಿದ್ದರ ಪ್ರತಿಫಲ, ಜಾಲಿಯ ಸ್ಥಳದಲ್ಲಿ ಈಗ ಈಕಜಾಲಿ ವಿಜೃಂಭಿಸುತ್ತಿದೆ.

◆ **ನಿಮ್ಮ ಪ್ರಾದೇಶಿಕತೆ ಮತ್ತು ಸಮುದಾಯದ ಭಾಷೆಯನ್ನು ನಿಮ್ಮ ಕಾವ್ಯದಲ್ಲಿ ಬಳಸಿಕೊಂಡಿಲ್ಲ. ಈ ಆಯ್ಕೆ ಪ್ರಜ್ಞಾಪೂರ್ವಕವೇ? ಇದಕ್ಕೆ ಬೇರೆ ಕಾರಣಗಳೇನಾದರೂ ಇವೆಯೇ?**

ಪ್ರಜ್ಞಾಪೂರ್ವಕ ಅಥವಾ ಬೇರೆ ಕಾರಣಗಳು ಇಲ್ಲವೇ ಇಲ್ಲ. ಅಕ್ಕಮಹಾದೇವಿ 'ಆನು ಒಲಿದಂತೆ ಹಾಡುವೆ' ಎಂದಂತೆ ನಾನು ಹಾಡಿದೆ, ಬರೆದೆ.

◆ **'ಆತ್ಮಕಥನ' ಬರೆಯುವ ಉದ್ದೇಶ ಇದೆಯೇ? ಉತ್ತರ ಕರ್ನಾಟಕದ ಬದುಕನ್ನು ಬಿಂಬಿಸುವ ಪ್ರಮುಖ ಆತ್ಮಕತೆ ಈಚಿನ ವರ್ಷಗಳಲ್ಲಿ ಬಂದಿಲ್ಲ. ಆ ಹಿನ್ನೆಲೆಯಲ್ಲಿ ಈ ಪ್ರಶ್ನೆ...**

ಆತ್ಮಕಥನ ಬರೆಯುವ ಉದ್ದೇಶ ಇದೆ. ಗೆಳೆಯರ, ಕತೆಗಾರ ಕುಂವೀ ಅಂತಹವರ ಒತ್ತಡ ಇದೆ. ನನ್ನದು ಹತ್ತರೊಳಗೆ ಹನ್ನೊಂದು ಎನ್ನುವ ಆತ್ಮಕಥನ ಆಗಬಾರದು. ಓದುಗರಿಗೆ ಹೊಸ ಸಂವೇದನೆ ನೀಡುವಂತಹದ್ದಾಗಿರಬೇಕು. ಬರೆದ ನನಗೂ ಸಂತೋಷ ನೀಡಬೇಕು ಎಂಬ ಆಲೋಚನೆ ನನ್ನದು. ಅದಕ್ಕೊಂದಿಷ್ಟು ತಯಾರಿಯೂ ನಡೆದಿದೆ.